ಕಾರ್ಯ ಕೈಗೊಂಡು ಕೆರೆಗಳ ಎಲ್ಲೆಗಳನ್ನು ಗುರುತಿಸಿ ಬೌಂಡರಿ ಕಲ್ಲುಗಳನ್ನು ನೆಡಬೇಕಾಗಿರುತ್ತದೆ ಇದಕ್ಕೆ ಸಾಕಷ್ಟು ಅನುದಾನ ಬೇಕಾಗುತ್ತದೆ

2 ಒತ್ತುವರಿದಾರರನ್ನು ಗುರುತಿಸಿ ಒತ್ತುವರಿಯನ್ನು ತೆರವುಗೊಳಿಸಲಾಗುವುದು

ದೊಡ್ಡ ಬಳ್ಳಾಪುರದಲ್ಲಿ ಕುಡಿಯುವ ನೀರಿನ ತೀವ್ರ ತೊಂದರೆಯ ಬಗ್ಗೆ

48 (413) ಶ್ರೀ ಕೃಷ್ಣಪ್ಪ ವಿ (ದೊಡ್ಡಬಳ್ಳಾಪುರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರ?

ಅ) ದೊಡ್ಡಬಳ್ಳಾಪುರ ನಗರದಲ್ಲಿ ಬರದ ಹಿನ್ನೆಲೆಯಲ್ಲಿ ಸುಮಾರು 80 ಸಾವಿರ ಜನರು ಕುಡಿಯುವ ನೀರಿನ ತೀವ್ರ ತೊಂದರೆ ಅನುಭವಿಸುತ್ತಿದ್ದು 3–4 ದಿನಗಳಿಗೊಮ್ಮೆ ನೀರು ನೀಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಮುಂದಿನ ಬೇಸಿಗೆಯ ದಿನಗಳಲ್ಲಿ ಇನ್ನೂ ತೀವ್ರ ತೊಂದರೆ ಬರುವ ಸಾಧ್ಯತೆಗಳಿರುವುದರಿಂದ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು

ಇ) ಪ್ರಸ್ತುತ ಸಾಲಿನಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ಕುಡಿಯುವ ನೀರಿಗಾಗಿ ನಗರಕ್ಕೆ ಬಿಡುಗಡೆಯಾಗಿರುವ ಹಣವೆಷ್ಟು ಇದರಲ್ಲಿ ಕೈಗೊಳ್ಳಲಾಗಿರುವ ಕ್ರಮಗಳೇನು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) ಬಂದಿದೆ

ಆ) ದೊಡ್ಡಬಳ್ಳಾಪುರ ನಗರಕ್ಕೆ 2002–03ನೇ ಸಾಲಿನ ಅಭಾವ ಪರಿಹಾರ ಕಾಮಗಾರಿಯಡಿ ಜಿಲ್ಲಾಧಿಕಾರಿಗಳವರಿಂದ ಮಂಜೂರಾಗಿರುವ ರೂ 5 00 ಲಕ್ಷಗಳಲ್ಲಿ ಇದುವರೆವಿಗೂ ರೂ 3 50 ಲಕ್ಷಗಳು ಬಿಡುಗಡೆಯಾಗಿದೆ ಈ ಮೊತ್ತದಡಿ 10 ಸಂಖ್ಯೆ ಕೊಳವೆ ಬಾವಿ ಕೊರೆದಿದ್ದು 3 ಸಂಖ್ಯೆಯ ಕೈಪಂಪ್ ಗಳನ್ನು ಅಳವಡಿಸಿ ಕಾಮಗಾರಿ ಪೂರ್ಣಗೊಳಿಸಲಾಗಿದೆ ಅಂತೆಯೇ ಅಭಾವ ಪರಿಹಾರ ಕಾಮಗಾರಿಯಡಿ ವಿವಿಧ ಬಡಾವಣೆಗಳಲ್ಲಿ ಕೊಳವೆ ಬಾವಿ ಕೊರೆಯುವುದು, ಪಂಪ್ ಅಳವಡಿಸುವುದು ಪೈಪ್ ಲೈನ್ ಹಾಕುವುದು ಹಾಗೂ ನೀರು ಸರಬರಾಜು ಮಾಡುವುದು ಈ ಕಾಮಗಾರಿಗಳಿಗೆ ರೂ 19 90 ಲಕ್ಷಗಳ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ

ಇ) ಪ್ರಸ್ತುತ ಸಾಲಿನಲ್ಲಿ ಹಣ ಇನ್ನೂ ಬಿಡುಗಡೆ ಆಗಬೇಕಾಗಿದೆ

ಗುಬ್ಬಿ ತಾಲ್ಲೂಕಿನ ಕಲ್ಲೂರು ಎಂ ವಿ ಸ್ಟೇಷನ್‌ನಿಂದ ಕುರುಬರಹಳ್ಳಿ – ಸಂಪಿಗೆ ಭಾಗದ ಹಳ್ಳಿಗಳಿಗೆ ಎಕ್ಸ್‌ಪ್ರೆಸ್ ಲೈನ್ ಮಂಜೂರಾತಿಯ ಬಗ್ಗೆ

50 (170) ಶ್ರೀ ಲಕ್ಷ್ಮೀನಾರಾಯಣ ಎಂ ಡಿ (ತುರುವೇಕೆರೆ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಕಲ್ಲೂರು ಎಂ ವಿ ಸ್ಟೇಷನ್‌ನಿಂದ ಕುರುಬರಹಳ್ಳಿ – ಸಂಪಿಗೆ ಭಾಗದ ಹಳ್ಳಿಗಳಿಗೆ ಎಕ್ಸ್‌ಪ್ರೆಸ್ ಲೈನ್ ಮಂಜೂರಾಗಿರುವುದು ನಿಜವೆ

ಆ) ಹಾಗಿದ್ದಲ್ಲಿ ಇದುವರೆವಿಗೂ ಕೆಲಸ ಪ್ರಾರಂಭ ಮಾಡದಿರಲು ಕಾರಣವೇನು

ಇ) ಈ ಭಾಗದ ರೈತರಿಗೆ ವೋಲ್ಟೇಜ್ ಇಲ್ಲದೆ ತೊಂದರೆಯಾಗುತ್ತಿರುವುದು ನಿಜವೇ

ಈ) ತಕ್ಷಣ ಕೆಲಸ ಪ್ರಾರಂಭ ಮಾಡಲಾಗುವುದೇ